# ಬೇಲೂರು ಮಠದಲ್ಲಿ ದುರ್ಗಾಪೂಜೆ

-ಸ್ವಾಮಿ ಭಜನಾನಂದ

ಅನುವಾದ:
ಡಾ. ಪಾಂಡುರಂಗ ವಿಠಲ

ಶರನ್ನವರಾತ್ರಿಯ ಸಂದರ್ಭದಲ್ಲಿ ಬಂಗಾಳದಲ್ಲಿ ದುರ್ಗಾಪೂಜೆಯ ಸಡಗರ. ಭಗವಚ್ಛಕ್ತಿಯನ್ನು ತಾಯಿಯೆಂದು ಪೂಜಿಸುವುದೇ ಇದರ ತಿರುಳು. ರಾಮಕೃಷ್ಣ ಮಹಾಸಂಘದ ಮುಖ್ಯಕೇಂದ್ರವಾದ ಬೇಲೂರು ಮಠದಲ್ಲಿ ವಿಶಿಷ್ಟ ರೀತಿಯಲ್ಲಿ, ಭಕ್ತಿಭಾವಗಳಿಂದ ಆಚರಿಸಲಾಗುವ ಈ ಪೂಜೆಯ ಮಹತ್ತ್ವವನ್ನು ತಾತ್ತ್ವಿಕ, ಪೌರಾಣಿಕ ಹಿನ್ನಲೆಗಳ ಮೂಲಕ ಸ್ವಾಮಿ ಭಜನಾನಂದಜಿ ನಮಗೆ ಪರಿಚಯಿಸುತ್ತಾರೆ. ಇವರು ರಾಮಕೃಷ್ಣ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರು. ಅನೇಕ ಲೇಖನಗಳನ್ನು ಬರೆದಿರುವ ಮೇಧಾವಿಗಳು. ಕನ್ನಡ ಅನುವಾದ ಮೈಸೂರಿನ ಪಾಂಡುರಂಗ ವಿಠಲ ಅವರದು.

## ಭಾಗ ಒಂದು : ದುರ್ಗಾಪೂಜೆಯ ಹಿನ್ನೆಲೆ

### ಶರದ್ ವೈಭವ:

ಭಾರತದಲ್ಲಿನ ಉತ್ತಮ ಋತುಗಳಲ್ಲಿ ಶರದೃತುವೂ ಒಂದು. ಆಗ ಸೂರ್ಯನ ದಕ್ಷಿಣಾಯನದಲ್ಲಿದ್ದು ಅವನ ಕಿರಣಗಳು ಒಂದು ಕೋನದಲ್ಲಿ ಬಾಗಿರುತ್ತವೆ. ಆಗ ಬಿರುಬೇಸಿಗೆಯ ಸೆಕೆಯಿಂದ ಬಿಡುಗಡೆ ಹೊಂದಿ ನಾಡು ನೆಮ್ಮದಿ ಪಡೆಯುತ್ತದೆ. ಮರಗಿಡ ಬಳ್ಳಿಗಳು, ಪೊದೆ, ಹುಲ್ಲು, ಕಳ್ಳಿ ಹೂಗಳಲ್ಲಿ ಮಳೆಗಾಲ ಹೊಸ ಚೈತನ್ಯವನ್ನು ತುಂಬಿರುತ್ತದೆ. ಭೂದೇವಿ ಗೈಯಾ (ಪ್ರಾಚೀನ ಗ್ರೀಕ್ ದೇವತೆಯ ಹೆಸರು ಹಾಗೂ ಭೂಮಿಯು ಜೀವಯುಕ್ತ ಎಂಬ ಸಿದ್ಧಾಂತ) ಎಲ್ಲೆಡೆ ಚೆಲ್ಲಿದ ಕಸೂತಿಯ ತರಹದ ಹಸುರುಡುಗೆಯಲ್ಲಿ ಶ್ರೀಮಂತವಾಗಿ ಕಂಗೊಳಿಸುತ್ತಾಳೆ.

ಶರದೃತುವಿನಲ್ಲಿ ಹಳ್ಳಿಗಳಲ್ಲಿ ಶಾಂತಿ ಮತ್ತು ಸಮೃದ್ಧಿಯ ಕಳೆಯಿರುತ್ತದೆ. ಹೊಸ ಧಾನ್ಯದಿಂದ ಕಣಜಗಳು ತುಂಬಿರುತ್ತವೆ, ಹೊಲಗಳ ವಿಶಾಲ ಮೈದಾನ ತೆರವಾಗಿ, ಅಲ್ಲಲ್ಲಿ ಹಸುಗಳು ಮೇಯುತ್ತಿರುತ್ತವೆ. ಹೊಲಗದ್ದೆಗಳ ಅಂಚಿನಲ್ಲಿ ಬಿಳಿ ನಸುಗೆಂಪಿನ ಕುಶಪುಷ್ಪಗಳ (ಒಂದು ಬಗೆಯ ಎತ್ತರದ ಹುಲ್ಲಿನಲ್ಲಿ ಬಿಡುವ ಹೂವು) ಸಾಲುಗಳು, ಮಂದವಾದ ಗಾಳಿಗೆ ಸಂತಸದಿಂದ ತಲೆದೂಗುತ್ತವೆ. ತಲೆಯ ಮೇಲೆ ಗಾಢ ನೀಲಿಮೆಯ ಆಗಸದಲ್ಲಿ ವಿರಳವಾದ ಬಿಳಿ ಮೋಡವೊಂದು ಗೊತ್ತು ಗುರಿಯಿಲ್ಲದೆ ಸೋಮಾರಿತನದಲ್ಲಿ ತೇಲಿಹೋಗುತ್ತದೆ. ಒಂದು ಬಗೆಯ ನಿಗೂಢ ಮೌನ ಗಾಳಿಯಲ್ಲಿ ತುಂಬಿಕೊಂಡಿದ್ದು, ಅಲ್ಲಲ್ಲಿ ಆಡುತ್ತಿರುವ ಮಕ್ಕಳ ಸದ್ದಿನಿಂದ ಆಗೀಗ ಭಗ್ನಗೊಳ್ಳುತ್ತಿದೆ. ತಾಯಿಯ ಅವತಾರಕ್ಕಾಗಿ ಪ್ರಕೃತಿ ತನ್ನನ್ನು ಅಣಿಗೊಳಿಸಿಕೊಂಡಂತಿದೆ! ದೇವಿಯ ಸ್ವಾಗತಕ್ಕೆ ಶರದೃತುವಿಗಿಂತ ಇನ್ನಾವ ಕಾಲ ತಾನೆ ಉತ್ತಮ! ದುರ್ಗಾಪೂಜೆಯು ತಾಯಿಯ ಅವತರಣವನ್ನು ಸೂಚಿಸುವುದಾಗಿದೆ.

### ಮಾತೃಪೂಜೆ

ಮಾನವತೆಗೆ ತಿಳಿದ ಪೂಜೆಯ ಪುರಾತನ ರೂಪಗಳಲ್ಲಿ ತಾಯಿಯ ಪೂಜೆಯೂ ಒಂದು. ಇತಿಹಾಸಪೂರ್ವ ಕಾಲದಲ್ಲಿ ಪ್ರಪಂಚದ ಎಲ್ಲೆಡೆ ದೇವರನ್ನು ಮಾತೃದೇವತೆ ಎಂದೇ ಪೂಜಿಸುತ್ತಿದ್ದರು. ಏಷ್ಯಾ, ಯುರೋಪ್, ಆಫ್ರಿಕಾ, ಅಮೆರಿಕದ ವಿವಿಧ ಸ್ಥಳಗಳಲ್ಲಿ ಮಾತೃಪೂಜೆ ನಡೆಯುತ್ತಿದ್ದ ಕುರುಹುಗಳು ಸಿಕ್ಕಿವೆ. ಆದರೆ ಭಾರತದಲ್ಲಿ ಮಾತ್ರ ಮಾತೃಪೂಜೆಯು ಪಂಥದ ಚೌಕಟ್ಟನ್ನೂ ಮೀರಿ ಬೆಳೆದು, ಶ್ರೇಷ್ಠ ಆಗಮಗಳು, ಶ್ರುತಿಗಳು, ಉಪಾಸನಾ ವಿಧಿಗಳು, ಸಂಪ್ರದಾಯಗಳು, ಹಬ್ಬಗಳೊಡನೆ ಒಂದು ಸಂಪೂರ್ಣ ಜೀವನ ಧರ್ಮವಾಗಿ ಬೆಳೆದಿದೆ. ಆಧುನಿಕ ಯುಗದಲ್ಲೂ ಕೋಟ್ಯಂತರ ಜನ ಇದನ್ನು ಅನುಸರಿಸುತ್ತಿದ್ದಾರೆ. ಬಂಗಾಳದಲ್ಲಿ ದೇವರನ್ನು ತಾಯಿಯೆಂದು ಪೂಜಿಸುವುದು ಸಂಸ್ಕೃತಿಯ ಅತ್ಯುನ್ನತ ರೂಪವನ್ನು ಪಡೆದು ಆಚರಣೆಗಳ ವೈವಿಧ್ಯತೆಯಿಂದ ಜನರ ಜೀವನದ ಪ್ರಧಾನ ಅಂಗವಾಗಿದೆ.

ಶ್ರೀರಾಮಕೃಷ್ಣರು, "ದೇವರನ್ನು ತಾಯಿ ಎಂದು ಭಾವಿಸುವುದು ಪರಿಶುದ್ಧ ಭಾವ ಹಾಗೂ ಸಾಧನೆಯ ಶ್ರೇಷ್ಠರೂಪ" (*ಮಾತೃ ಭಾವ್ ಶುದ್ಧ ಭಾವ್, ಸಾಧನಾರ್ ಶೇಷ್ ಕಥಾ*) ಎಂದಿದ್ದಾರೆ. ಅವರು ಹಾಗೆನ್ನಲು ಕಾರಣವೇನು? ಮಾನವ ಪ್ರೀತಿಯ ವಿವಿಧ ಅಭಿವ್ಯಕ್ತಿಗಳಲ್ಲಿ ತಾಯಿಯ ವಾತ್ಸಲ್ಯವೇ ಅತ್ಯಂತ ನಿಃಸ್ವಾರ್ಥ ಹಾಗೂ ನಿರ್ಬಂಧಗಳಿಲ್ಲದ ಸ್ವರೂಪದ್ದು. ಹೆತ್ತು, ಹೊತ್ತು, ಶಿಶುವಿಗೆ ಬೇಕಾದ ಪಾಲನೆ – ಪೋಷಣೆ – ನೆಮ್ಮದಿ–ತರಬೇತಿ–ಶಿಕ್ಷಣ ಮೊದಲಾಗಿ ಎಲ್ಲವನ್ನೂ ನೀಡುವ ತಾಯಿಯೇ ಮಗುವಿನ ಸರ್ವಸ್ವ. ದೇವರನ್ನು ಮಾತೃ ಸ್ವರೂಪವಾಗಿ ತಿಳಿಯುವುದು ಒಬ್ಬನ ಜೀವನದಲ್ಲಿ ದೇವರ ಎಲ್ಲ ಸಾಧ್ಯತೆಗಳನ್ನೂ ಕಂಡುಕೊಂಡಂತೆ. ಅತಿ ಆಪ್ತವಾದ, ಪರಿಶುದ್ಧವಾದ, ಸಹಜವಾದ ಸಂಬಂಧ ಇದು.

### ಭಾರತದಲ್ಲಿ ಮಾತೃಪೂಜೆ: ಇತಿಹಾಸಪೂರ್ವ ಕಾಲದಿಂದ

ಭಾರತದಲ್ಲಿ ದೇವರನ್ನು ಮಾತೃಭಾವದಿಂದ ಪೂಜಿಸುವುದು ಹಿಂದಿನಿಂದಲೂ ನಡೆದುಬಂದಿದೆ. ಹರಪ್ಪಾ ಮೊಹೆಂಜೊದಾರೊ ನಾಗರಿಕತೆಯಲ್ಲಿ ಇದು ಇದ್ದಿರಬೇಕು. ಋಗ್ವೇದದಲ್ಲಿ ದೇವೀಸೂಕ್ತವೆಂಬ (ಇದನ್ನು ದುರ್ಗಾಪೂಜೆಯ ದಿನಗಳಲ್ಲಿ ಪಠಿಸುತ್ತಾರೆ) ಸುಂದರ ಪ್ರಾರ್ಥನೆ ಇದೆ. ಈ ಸೂಕ್ತದಲ್ಲಿ ತಾನು ರುದ್ರರು, ವಸುಗಳು, ಆದಿತ್ಯರು ಮತ್ತಿತರ ಎಲ್ಲ ದೇವತೆಗಳ ಜತೆ ಚಲಿಸುವುದಾಗಿಯೂ, ತಾನೇ ಎಲ್ಲ ದೇವತೆಗಳ ಶಕ್ತಿ, ಪ್ರಪಂಚದ ರಾಣಿ ಎಂದು ಮುಂತಾಗಿ ದೇವಿ ಹೇಳಿಕೊಳ್ಳುತ್ತಾಳೆ.

ಆದರೆ ದೇವೀ ಮಹಾತ್ಮೆ ಅಥವಾ ಜನರು ಕರೆಯುವ 'ಚಂಡಿ' ಯಲ್ಲಿ ದೇವಿಯ ಪೂಜೆಯು ಸ್ವತಂತ್ರವೂ ಪರಮವೂ ಆದ ಸ್ಥಿತಿಯನ್ನು ಪಡೆಯಿತೆನ್ನಬಹುದು. ಮಾರ್ಕಂಡೇಯ ಪುರಾಣದ ಭಾಗವಾಗಿದ್ದರೂ 'ಚಂಡಿ' ಯನ್ನು ಸ್ವತಂತ್ರ ಶಾಸ್ತ್ರ ಗ್ರಂಥವೆಂದು ಪರಿಗಣಿಸಲಾಗಿದೆ. ಮುಖ್ಯವಾಗಿ ಬಂಗಾಳ, ಕೇರಳ, ತಮಿಳ್ನಾಡಿನ ಕೆಲವು ಭಾಗಗಳಲ್ಲಿ ದೇವಿಯ ಭಕ್ತರು 'ಚಂಡಿ'ಯನ್ನು ಅತಿ ಪವಿತ್ರ ಮತ್ತು ಪ್ರಮುಖ ಶಾಸ್ತ್ರಗ್ರಂಥ ಎಂದು ಭಾವಿಸುತ್ತಾರೆ. ಇದು ರಚಿತವಾದ ಕಾಲ ಆರರಿಂದ ಒಂಬತ್ತನೆಯ ಶತಮಾನದ ನಡುವೆ.

ಶಕ್ತಿಪೂಜೆಯ ಇನ್ನೊಂದು ಅಧಿಕೃತ ಗ್ರಂಥ ದೇವೀಭಾಗವತ. ಆರನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ಶಾಕ್ತ ಶಾಸ್ತ್ರ ಗ್ರಂಥಗಳಲ್ಲಿ ತಂತ್ರ ಎಂದು ಕರೆಯುವ ಗ್ರಂಥಗಳು (ಒಟ್ಟು ೬೩ ಗ್ರಂಥಗಳಿವೆ ಎಂದು ನಂಬಲಾಗಿದೆ) ರಚಿತವಾದುವು. ಬಂಗಾಳ, ಕೇರಳ ಮತ್ತು ಕಾಶ್ಮೀರ ಎಂಬ ಭರತಖಂಡದ ಮೂರು ತ್ರಿಕೋನ ಸ್ಥಾನಗಳಲ್ಲಿ ತಂತ್ರಗಳು ಜನಪ್ರಿಯವಾದವು.



ದುರ್ಗಾ ಪ್ರತಿಮೆ

ಕನ್ಯಾಕುಮಾರಿಯಿಂದ (ಕನ್ಯಾಕುಮಾರಿ ದೇವಸ್ಥಾನಕ್ಕಾಗಿ ಪ್ರಸಿದ್ಧ) ಕಾಶ್ಮೀರದವರೆಗೆ, (ಕ್ಷೀರಭವಾನಿ ದೇವಸ್ಥಾನ) ರಾಜಸ್ಥಾನದಿಂದ (ಅಂಬಾ ದೇವಸ್ಥಾನ) ಕೊಲ್ಕತಾದವರೆಗೆ (ಕಾಳೀಘಾಟ್ ದೇವಾಲಯ) ಭಾರತದಲ್ಲೆಲ್ಲ ದೇವಿ ಆರಾಧನೆ ನಡೆಯುತ್ತದೆ. ದೇವಿಯ ದೇವಸ್ಥಾನ ಇಲ್ಲದಿರುವ ಪ್ರದೇಶಗಳೇ ಇಲ್ಲ. ಹಿಂದಿನ ವೀರರುಗಳು ದೇವಿಯನ್ನು ಆರಾಧಿಸುತ್ತಿದ್ದರು. ಶ್ರೀರಾಮನು ರಾವಣನನ್ನು ಕೊಲ್ಲುವ ಮುನ್ನ ದುರ್ಗೆಯನ್ನು ಪೂಜಿಸಿದ್ದ. ಮರಾಠಾ ವೀರಪ್ರಮುಖ ಶಿವಾಜಿಯು ಭವಾನಿಯ ಭಕ್ತ. ಹತ್ತನೆಯ ಗುರು ಗುರುಗೋವಿಂದ ಸಿಂಗ್ ದುರ್ಗಾಮಾತೆಯ ಆರಾಧಕನಾಗಿದ್ದ ಎನ್ನುತ್ತಾರೆ.

### ದೇವಿಯ ವಿವಿಧ ರೂಪಗಳು

ದೇವಿ ಒಬ್ಬಳೇ ಆದರೂ ಅವಳ ಸ್ವರೂಪಗಳು ಬೇರೆ ಬೇರೆ. ಕ್ರಿಸ್ತಶಕೆಯ ಮೊದಲ ಶತಮಾನಗಳಲ್ಲಿ ಅವಳೊಬ್ಬಳನ್ನೇ ಪರಮದೇವತೆಯಾಗಿ ಪೂಜಿಸುತ್ತಿದ್ದರು. ಸಿಂಹವಾಹಿನಿಯಾಗಿ ದೇವಿಯನ್ನು ಚಿತ್ರಿಸುತ್ತಿದ್ದರು.'ಚಂಡಿ'ಯಲ್ಲಿ ಬರುವ ದುರ್ಗೆಯ ಪ್ರತಿಮೆ ಇದೇ – ಅವಳು ಇಲ್ಲಿ ಚಾಮುಂಡೇಶ್ವರಿಯಾಗಿ, ಮಹಿಷಾಸುರಮರ್ದಿನಿಯಾಗಿ ಕಾಣಿಸಿಕೊಳ್ಳುತ್ತಾಳೆ.

ಅನಂತರದ ಶತಮಾನಗಳಲ್ಲಿ ದೇವಿಯನ್ನು ಶಿವನ ಪತ್ನಿಯಾಗಿ ಕಲ್ಪಿಸಿದರು. ಇಲ್ಲೂ ಎರಡು ಶಾಖೆಗಳಿವೆ. ಮೊದಲಿನದರಲ್ಲಿ ದೇವಿ ಹಾಗೂ ಶಿವ ಸಮಶಕ್ತರು. ಸಮಯಾಚಾರ ಎಂದು ಹೆಸರಿರುವ ಈ ಶಾಖೆ ದಕ್ಷಿಣ ಭಾರತದಲ್ಲಿ ಸಾಮಾನ್ಯ. ಕೌಲ ಎಂಬ ಇನ್ನೊಂದು ಶಾಖೆಯಲ್ಲಿ ದೇವಿಯು ಕಾಳೀರೂಪಳಾಗಿದ್ದಾಳೆ. ಇವಳು ಕ್ರಿಯಾ ತತ್ತ್ವ, ಶಿವನು ನಿಷ್ಕ್ರಿಯ ತತ್ತ್ವ. ಈ ಶಾಖೆಯ ಅನುಯಾಯಿಗಳು ಬಂಗಾಳ, ಕಾಶ್ಮೀರ ಹಾಗೂ ಕೇರಳಗಳಲ್ಲಿ ಬಹು ಸಂಖ್ಯೆಯಲ್ಲಿ ಇದ್ದಾರೆ.

ದೇವಿಯು ಹತ್ತು ದೇವತೆಗಳ ಸ್ವರೂಪವನ್ನು (ದಶ ಮಹಾವಿದ್ಯಾ) ಹೊಂದಿದ್ದಾಳೆ: ಕಾಳಿ, ತಾರಾ, ತ್ರಿಪುರಸುಂದರೀ (ಷೋಡಶಿ), ಭುವನೇಶ್ವರಿ, ಭೈರವೀ, ಛಿನ್ನಮಸ್ತಾ, ಧೂಮವತೀ, ಬಗಲಾಮುಖೀ, ಮಾತಂಗೀ (ಸರಸ್ವತೀ) ಮತ್ತು ಕಮಲಾ (ಲಕ್ಷ್ಮೀ).

### ನವರಾತ್ರಿ ಮತ್ತು ದುರ್ಗಾಪೂಜೆ.

ಆಶ್ವಯುಜ ಮಾಸದ ಮಹಾಲಯ ಅಮಾವಾಸ್ಯೆಯ ನಂತರದ ಮೊದಲ ಒಂಬತ್ತು ದಿನಗಳನ್ನು ನವರಾತ್ರಿ ಹಬ್ಬವಾಗಿ ಭಾರತಾದ್ಯಂತ ಆಚರಿಸಲಾಗುತ್ತದೆ. ಈ ದಿನಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ದೇವಿಯನ್ನು ಪೂಜಿಸುತ್ತಾರೆ. ತಮ್ಮ ಮನೆಯಲ್ಲಿ ಅಂತಹ ಪೂಜೆಯನ್ನು ನೆರವೇರಿಸಲು ಆಗದ ಬಹುಸಂಖ್ಯೆಯ ಹಿಂದೂಗಳು ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು ಉಟ್ಟು ದೇವಿಯ ದೇವಸ್ಥಾನಕ್ಕೆ ಹೋಗುತ್ತಾರೆ. ಹತ್ತನೆಯ ದಿನ ದಸರಾ (ವಿಜಯದಶಮಿ). ಅಂದು ಉತ್ತರ ಭಾರತದಲ್ಲಿ ರಾಮಾಯಣವನ್ನು ಆಧರಿಸಿದ 'ರಾಮಲೀಲಾ' ನಾಟಕವನ್ನು ಈಗಲೂ ಸಾರ್ವಜನಿಕವಾಗಿ ಆಡುತ್ತಾರೆ. ಈ ದಿನದಂದು ಆಯುಧಗಳು, ಉಪಕರಣಗಳನ್ನು ಪೂಜಿಸುತ್ತಾರೆ. (ಬಂಗಾಳದಲ್ಲಿ ಆಯುಧಪೂಜೆಯನ್ನು 'ವಿಶ್ವಕರ್ಮ ಪೂಜಾ' ಎಂದು ಕರೆಯುವ ಮತ್ತೊಂದು ವಿಶೇಷ ದಿನದಂದು ಮಾಡುತ್ತಾರೆ.)

ನವರಾತ್ರಿಯ ಈ ದಿನಗಳಲ್ಲಿ ಬಂಗಾಳದಲ್ಲಿ ದುರ್ಗಾ ಪೂಜೆಯನ್ನು ಆಚರಿಸುತ್ತಾರೆ. ದುರ್ಗಾಪೂಜೆಯ ಆಚರಣೆಯೇ ಬಂಗಾಳದ ವಿಶಿಷ್ಟ ಸಾಮಾಜಿಕ-ಧಾರ್ಮಿಕ ಸಂಸ್ಕೃತಿಯ ಮುಖ್ಯ ಲಕ್ಷಣ. ಬಂಗಾಳದಲ್ಲಿ ದುರ್ಗಾಪೂಜೆಯು ಜನರ ಜೀವನವನ್ನು ಆಳವಾಗಿ ತಟ್ಟುವಂತೆ ಭಾರತದ ಇನ್ನಾವ ಭಾಗದಲ್ಲೂ ಅಷ್ಟು ಪ್ರಭಾವ ಬೀರುವುದಿಲ್ಲ. ಮಹಾಲಯದಂದು ಆರಂಭವಾಗುವ ಹಬ್ಬಗಳ ಸಂಭ್ರಮ ಒಂದು ತಿಂಗಳವರೆಗೆ ಮುಂದುವರಿಯುತ್ತದೆ. ಈ ಕಾಲದಲ್ಲಿ ಜನರು ಹೊಸ ಬಟ್ಟೆ ಧರಿಸಿ, ನಗರದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿದ ಸುಂದರ ಪೆಂಡಾಲುಗಳಲ್ಲಿ ದೇವಿಯನ್ನು ಪೂಜಿಸಿ, ಪ್ರಸಾದ ಪಡೆಯುತ್ತಾರೆ.

ದುರ್ಗಾಪೂಜೆಯಲ್ಲಿ ಎದ್ದು ಕಾಣುವ ಅಂಶ, ದೇವಿಯ ಪ್ರತಿಮೆಯು ಮಹಿಷಾಸುರಮರ್ದಿನಿಯ ರೂಪದಲ್ಲಿರುವುದು. ದೇವಿಗೆ ಹತ್ತು ಕೈಗಳಿದ್ದು, ವಿವಿಧ ಆಯುಧಗಳನ್ನು ಹಿಡಿದಿರುತ್ತಾಳೆ (ಅಂತೆಯೇ ಅವಳನ್ನು ದಶಪ್ರಹರಣಧಾರಿಣಿ ಎಂದು ವರ್ಣಿಸಲಾಗಿದೆ). ಪ್ರತಿಮೆಯನ್ನು ಶುದ್ಧಗೊಳಿಸಿ ದೇವಿಯನ್ನು ಆವಾಹಿಸಿದ ಮೇಲೆ ಅದು ದಿವ್ಯರೂಪ ತಾಳುತ್ತದೆ. ಈಗ ಈ ಪ್ರತಿಮೆ ಮೃಣ್ಮಯ ಮೂರ್ತಿಯಲ್ಲ, ಶಕ್ತಿ, ಜ್ಞಾನ, ಪ್ರೇಮ ಮತ್ತು ಸಂತೋಷವನ್ನು ಎಲ್ಲೆಡೆ ಪಸರಿಸುವ ಚಿನ್ಮಯ ಮೂರ್ತಿ, ಕರುಣಾಶೀಲೆಯಾದ ವಿಶ್ವಮಾತೆಯು ತನ್ನ ಮಕ್ಕಳನ್ನು ಆಶೀರ್ವದಿಸಲು, ತನ್ನ ಪ್ರೀತಿ, ಸಹಾಯ ಮತ್ತು ರಕ್ಷಣೆಯ ಅಭಯಹಸ್ತ ನೀಡಲು ಅವತರಿಸುತ್ತಾಳೆ.

ದುರ್ಗಾಪೂಜೆಯನ್ನು ಹೀಗೆ ಸಾರ್ವಜನಿಕ ಸಂಭ್ರಮವನ್ನಾಗಿಸಿದ ಮೊದಲಿಗರು ಯಾರು? ಸಾಮಾನ್ಯವಾಗಿ ಒಪ್ಪಿತವಾಗಿರುವಂತೆ ಈಗ ಬಾಂಗ್ಲಾ ದೇಶದಲ್ಲಿರುವ ರಾಜಶಾಹಿ ಜಿಲ್ಲೆಯ ತಾಹಿರ್‌ಪುರ್ ರಾಜ ಕಂಸನಾರಾಯಣನು ಕ್ರಿ.ಶ. ೧೬೦೦ ರಲ್ಲಿ ಈಗ ನಡೆಯುತ್ತಿರುವ ರೀತಿಯಲ್ಲಿ ಸಾರ್ವಜನಿಕ ಸಮಾರಂಭವಾಗಿ ದುರ್ಗಾಪೂಜೆಯನ್ನು ಪ್ರಾರಂಭಿಸಿದನು.

**ದಂತಕತೆಗಳ ಮಿಶ್ರಣ:**

ದುರ್ಗಾಪೂಜೆಯ ಪೌರಾಣಿಕ ಹಿನ್ನೆಲೆ ಏನು? ಅನೇಕ ಪೌರಾಣಿಕ ಕತೆಗಳು ದುರ್ಗಾಪೂಜೆಗೆ ಒಟ್ಟಾಗಿ ಆಧಾರವಾಗಿವೆ. ಇವನ್ನು ಈ ಕೆಳಗೆ ನೀಡಲಾಗಿದೆ :

೧. ರಾವಣನ ಜತೆ ಯುದ್ಧ ಮಾಡುವ ಮುನ್ನ ಶ್ರೀರಾಮಚಂದ್ರನಿಗೆ ದೇವಿ ದುರ್ಗೆಯನ್ನು ಹರಕೆಯಿಂದ ಒಲಿಸಿಕೊಳ್ಳಲು ನಾರದರು ಸಲಹೆ ನೀಡುತ್ತಾರೆ. ಹಿಂದೂ ಪೌರಾಣಿಕ ನಂಬಿಕೆಯ ಪ್ರಕಾರ ಸೂರ್ಯನು ದಕ್ಷಿಣಾಯನದಲ್ಲಿದ್ದಾಗ ಆರು ತಿಂಗಳ ಕಾಲ ದೇವತೆಗಳು ನಿದ್ರಿಸುತ್ತಾರೆ (ಸೂರ್ಯನು ಉತ್ತರಾಯಣದಲ್ಲಿರುವ ಆರುತಿಂಗಳು ಅವರು ಎಚ್ಚರವಾಗಿರುತ್ತಾರೆ) ಹೀಗಾಗಿ, ರಾಮನು ಮೊದಲು ದೇವಿಯನ್ನು ಜಾಗ್ರತಳನ್ನಾಗಿಸಬೇಕಾಯಿತು. ಇದೇ ದುರ್ಗಾಪೂಜೆಯ ಮೊದಲ ಆಚರಣೆ—ದುರ್ಗೆಯನ್ನು ಜಾಗೃತಗೊಳಿಸುವುದು (ಬೋಧನ್) — ಆಗಿರಲು ಕಾರಣ. ಕೃತ್ತಿವಾಸನ ಬಂಗಾಳಿ ರಾಮಾಯಣದಲ್ಲಿ ಈ ಕತೆ ಬಂದಿದೆ. ಇನ್ನಿತರ ಪುರಾಣಗಳಲ್ಲಿ ರಾಮನು ದೇವಿಯನ್ನು ಎಚ್ಚರಗೊಳಿಸಲು ಬಯಸಿದಾಗ ಬ್ರಹ್ಮನು ದೇವಿಯನ್ನು ಜಾಗ್ರತಗೊಳಿಸುತ್ತಾನೆ. ಹೀಗೆ ಶ್ರೀರಾಮನು ಮಾಡಿದ ಮೊದಲ ದುರ್ಗಾಪೂಜೆಯ ನೆನಪಿನ ಆಚರಣೆ ಈ ಕಾಲದ ದುರ್ಗಾಪೂಜೆ.

೨. ಉಮಾದೇವಿಯು ತನ್ನ ತವರೂರಾದ ಕೈಲಾಸಕ್ಕೆ ಬಂದ ಕತೆ ಎರಡನೆಯದು. ಸಿಂಹವಾಹಿನಿಯಾಗಿ ಆಕೆ ಬರುತ್ತಾಳೆ; ವೇದಗಳಲ್ಲಿ, ಕೇನ ಉಪನಿಷತ್ತಿನಲ್ಲಿ ಉಮೆಯನ್ನು 'ಉಮಾ ಹೈಮಾವತೀ' ಎಂದು ಮೊದಲು ಹೆಸರಿಸಲಾಗಿದೆ (ಉಮೆ ಬಂದು, ಜನರೊಡನೆ ಮೂರು ದಿನ ಇರುತ್ತಾಳೆಂಬುದು ಬಂಗಾಳಿಗಳ ಜನಪ್ರಿಯ ನಂಬಿಕೆ). ಉಮೆ ತೌರಿಗೆ ಹಿಂದಿರುಗುವ ಸಂದರ್ಭವನ್ನು ವಿವರಿಸುವ ಆಗಮನೀ ಎಂದು ಕರೆಯುವ ಭಾವಪೂರ್ಣ ಹಾಡುಗಳ ಗುಂಪೇ ಇದೆ. ಆಗಮನೀ ಗೀತೆಗಳನ್ನು ದುರ್ಗಾಪೂಜೆಯು ಪ್ರಾರಂಭವಾಗುವ ದಿನಗಳ ಮೊದಲೇ ಹಾಡುವರು. ಮದುವೆಯಾಗಿ ಹೋದ ಹೆಣ್ಣುಮಕ್ಕಳ ಮೇಲೆ ಹಿಂದೂ ತಾಯಂದಿರ ಪ್ರೀತಿಯನ್ನು ಆಧ್ಯಾತ್ಮಿಕ ಮಟ್ಟಕ್ಕೆ ಏರಿಸಲು ಈ ಗೀತೆಗಳು ಸಹಕಾರಿಯಾಗಿವೆ.

೩. ಸತೀದೇವಿಯ ಬಗೆಗಿನದು ಮೂರನೆಯ ಪೌರಾಣಿಕ ಕತೆ. 'ಚಂಡಿ'ಯಲ್ಲಿ ಸತಿಯ ಅಥವಾ ಉಮೆಯ ಹೆಸರು ಉಲ್ಲೇಖಗೊಂಡಿಲ್ಲ. ಆದರೆ ದುರ್ಗಾಪೂಜೆಯ ಮೂಲ ಮಂತ್ರದಲ್ಲಿ ದುರ್ಗೆಯನ್ನು 'ದಕ್ಷಯಜ್ಞ ವಿನಾಶಿನ್ಯೈ' (ದಕ್ಷನ ಯಜ್ಞವನ್ನು ಧ್ವಂಸಗೊಳಿಸಿದವಳು) ಎಂದು ಆಕೆಯನ್ನು ಸಂಬೋಧಿಸಲಾಗಿದೆ.

ವಿಶ್ವವನ್ನು ಸೃಷ್ಟಿಸಿದ ಪ್ರಜಾಪತಿಗಳಲ್ಲಿ ದಕ್ಷನೂ ಒಬ್ಬ. ಅವನಿಗಿದ್ದ ಎಂಟು ಜನ ಹೆಣ್ಣುಮಕ್ಕಳಲ್ಲಿ ಹಿರಿಯವಳು ಸತಿ. ತಂದೆಗೆ ಇಷ್ಟವಿರದಿದ್ದರೂ, ಕೈಲಾಸಪರ್ವತದಲ್ಲಿ ಜಟಾಧಾರಿಯಾಗಿ, ಅಸಾಂಪ್ರದಾಯಿಕ ಜೀವನ ನಡೆಸುತ್ತಿದ್ದ ವಿರಾಗಿ ಶಿವನನ್ನು ಸತಿ ಮದುವೆಯಾದಳು. ಕೆಲ ವರ್ಷಗಳ ಬಳಿಕ ತ್ರಿಲೋಕಸಂಚಾರಿ ನಾರದರು ಕೈಲಾಸಕ್ಕೆ ಬಂದು ದಕ್ಷನು ದೊಡ್ಡ ಯಜ್ಞವನ್ನು ನಡೆಸಲಿರುವನೆಂದು ಹೇಳಿದರು. ದಕ್ಷನು ಎಲ್ಲ ದೇವದೇವತೆಗಳನ್ನು ಯಜ್ಞಕ್ಕೆ ಆಹ್ವಾನಿಸಿದ್ದನು; ಶಿವ-ಸತಿಯರನ್ನು ಕರೆದಿರಲಿಲ್ಲ. ಆಹ್ವಾನವಿಲ್ಲದಿದ್ದರೂ ಸತಿ ತನ್ನ ತಂದೆಯನ್ನು ನೋಡಲು ಹೋದಳು. ದಕ್ಷನಾದರೋ ಎಲ್ಲರ ಸಮಕ್ಷಮದಲ್ಲಿ ಶಿವನನ್ನು ಹೀಯಾಳಿಸಿ ಮಾತನಾಡಿದ. ಅವಮಾನ ತಡೆಯಲಾಗದ ಸತಿ ಸತ್ತುಬಿದ್ದಳು. ಶಿವ ಕೋಪದಿಂದ ಕೆಂಡವಾದ. ಅವನ ಸಿಟ್ಟು ದಕ್ಷನನ್ನೂ ಅವನ

ಯಜ್ಞವನ್ನೂ ಬೂದಿ ಮಾಡಿತು. ಅನಂತರ ಶಿವನು ತಾಂಡವನೃತ್ಯ ಮಾಡಲು ತೊಡಗಿದ. ದೇವತೆಗಳು ಬೇಡಿಕೊಳ್ಳಲಾಗಿ ಶಿವನು ಕೊನೆಗೆ ತಪಸ್ಸಿಗಾಗಿ ಕೈಲಾಸಪರ್ವತಕ್ಕೆ ಹಿಂದಿರುಗಿದ. ಸತಿಯು ಪುನಃ ಪಾರ್ವತಿಯಾಗಿ ಹುಟ್ಟಿಬಂದಳು. ಅನೇಕ ವರ್ಷಗಳ ಆಳವಾದ ತಪಸ್ಸಿನಿಂದ ಶಿವನನ್ನು ಒಲಿಸಿ, ಪುನಃ ಅವನನ್ನೇ ಪತಿಯಾಗಿ ಪಡೆದಳು.

'ದಕ್ಷಯಜ್ಞ ವಿನಾಶಿನ್ಯೈ' ಎಂಬ ಮೂಲ ಮಂತ್ರ ಹೀಗೆ ದಕ್ಷಯಜ್ಞದ ಧ್ವಂಸದ ಕತೆಯನ್ನು ಆಧರಿಸಿದೆ. ಈ ಪೌರಾಣಿಕ ಅರ್ಥಕ್ಕಿಂತ ಈ ಮಹಾಮಂತ್ರವು ಇನ್ನೂ ಹೆಚ್ಚಿನ ಆಧ್ಯಾತ್ಮಿಕ ರಹಸ್ಯಾರ್ಥವನ್ನು ಹೊಂದಿರಬೇಕೆಂದು ಅನ್ನಿಸುತ್ತದೆ.

'ದಕ್ಷಯಜ್ಞ ವಿನಾಶಿನ್ಯೈ' ಎಂಬ ಮಂತ್ರದ ಆಧ್ಯಾತ್ಮಿಕ ಅರ್ಥ ಹೀಗಿದೆ: ದಕ್ಷ ಪ್ರಜಾಪತಿಯ (ಸೃಷ್ಟಿಕರ್ತ) ಯಜ್ಞವೆಂದರೆ ಸಂಸಾರ, ಪುನರ್ಜನ್ಮಗಳ ಸರಣಿಯಲ್ಲಿಯ ನಮ್ಮ ಈಗಿನ ಅಸ್ತಿತ್ವದ ಸ್ಥಿತಿ. ವಿಶ್ವಯಜ್ಞದ ಭಾಗವಾಗಿ ನಮ್ಮ ಇಡೀ ಜೀವನವೂ ಯಜ್ಞವಾಗಿದೆಯೆಂದು ಗೀತೆ (೩.೧೦-೧೬) ಹೇಳುತ್ತದೆ. ಕರ್ಮದಿಂದ ನಾವು ಈ ಯಜ್ಞದಲ್ಲಿ ಭಾಗಿಗಳಾಗುವೆವು. ಕರ್ಮವು ಕರ್ಮಫಲ ಮತ್ತು ಹೆಚ್ಚಿನ ಕರ್ಮ ಹಾಗೂ ಪುನರ್ಜನ್ಮಕ್ಕೆ ಕಾರಣವಾಗುವುದು. ಈ ರೀತಿಯಲ್ಲಿ ನಮ್ಮ ಜೀವನವು ಜನನ-ಮರಣಗಳ ಕೊನೆಯಿಲ್ಲದ ಚಕ್ರದಲ್ಲಿ ತಿರುಗುತ್ತಿರುವುದು. ದೇವಿ ದುರ್ಗೆಯು ವರುಷಕ್ಕೊಮ್ಮೆ ಬಂದು ನಮ್ಮ ಕರ್ಮಗಳನ್ನು ನಾಶ ಮಾಡುವಳು ಮತ್ತು ನಮ್ಮ ಪುನರ್ಜನ್ಮಗಳ ಶೃಂಖಲೆಯನ್ನು ಕೊನೆಗಾಣಿಸುವಳು. ಅನಂತರ ನಾವು ಮುಕ್ತಿಯನ್ನು ಹೊಂದುವೆವು.

೪. 'ಚಂಡಿ'ಯ ವಸ್ತು ದುರ್ಗೆಯ ಕತೆ. ಇದು ಅತಿ ಮುಖ್ಯವಾಗಿದ್ದು, ದುರ್ಗಾಪೂಜೆಯ ಕೇಂದ್ರ ವಸ್ತುವಾಗಿದೆ. 'ಕೋಟೆಯಂತೆ ರಕ್ಷಿಸುವವಳು' ಅಥವಾ 'ನಮ್ಮ ಕರ್ಮಗಳ ಕೆಟ್ಟ ಪರಿಣಾಮಗಳನ್ನು ನಾಶಮಾಡುವವಳು (ದುರ್ಗತಿನಾಶಿನಿ)' ಎಂಬ ಅರ್ಥ ದುರ್ಗಾ ಎಂಬ ಪದಕ್ಕೆ ಇದೆ. 'ಚಂಡಿ'ಯಲ್ಲಿ ದುರ್ಗೆಯನ್ನು ಸರಳವಾಗಿ ದೇವಿ, ದೇವತೆ ಎಂದು ಕರೆದಿದೆ. ಕೆಲವೆಡೆ ಅಂಬಿಕಾ ಎಂದೂ ಹೇಳಿದೆ. ಈಕೆ ಸ್ವತಂತ್ರಳಾದ ಶ್ರೇಷ್ಠ ದೇವತೆ — ಯಾವ ಪುರುಷನ ಸಂಗಾತಿಯೂ ಅಲ್ಲ.

ಹಿಂದೆಯೆ ಹೇಳಿದಂತೆ ದೇವೀಪೂಜೆಯ ಶಾಸ್ತ್ರ ಗ್ರಂಥಗಳಲ್ಲೆಲ್ಲ 'ಚಂಡಿ' ಪುರಾತನವಾಗಿದ್ದು, ಹಿಂದೂ ಧರ್ಮದಲ್ಲಿ ಶೈವ-ವೈಷ್ಣವ-ಶಕ್ತಿ ಪಂಥಗಳ ಮತ ಭೇದ ಉಂಟಾಗುವ ಮುನ್ನ ರಚಿತವಾದದ್ದೆಂದು ತೋರುತ್ತದೆ. ಹೀಗಾಗಿ, ಈ ಗ್ರಂಥದಲ್ಲಿ ವಿಷ್ಣುಶಕ್ತಿ, ನಾರಾಯಣಿ ಎಂದು ದೇವಿಯನ್ನು ಬಾರಿ ಬಾರಿಗೂ ಸಂಬೋಧಿಸಲಾಗಿದೆ.

'ಚಂಡಿ'ಯಲ್ಲಿ ದುರ್ಗೆಯ ವರ್ಣನೆ

'ಚಂಡಿ' ಯಲ್ಲಿ ಮೂರು ಭಾಗಗಳಿವೆ. ಮೊದಲ ಭಾಗದಲ್ಲಿ ವಿಷ್ಣುವಿನ ಯೋಗನಿದ್ರೆಯೆಂದು ವರ್ಣಿತಳಾದ ಮಹಾಮಾಯೆಯಾಗಿ ದೇವಿ ಕಾಣಿಸಿಕೊಳ್ಳುತ್ತಾಳೆ. ಮಹಾಮಾಯೆಯೆಂದರೆ ಜನರ ಆಲಸ್ಯ, ಮೈಗಳ್ಳತನ, ನಿದ್ರೆಗೆ ಕಾರಣವಾಗುವ ತಮಸ್ಸಿನ ಶಕ್ತಿ. ಈ ವಿಶ್ವ ವಿಮೋಹಕ ಶಕ್ತಿಯ ಪ್ರಭಾವದಿಂದ ವಿಷ್ಣು ನಿದ್ರಿಸತೊಡಗುತ್ತಾನೆ. ಆಗ ವಿಷ್ಣುವಿನ ಕಿವಿಗಳಿಂದ ಮಧುಕೈಟಭರೆಂಬ ದೈತ್ಯರು ಹೊರಬಂದು ಸೃಷ್ಟಿಕರ್ತನಾದ ಬ್ರಹ್ಮನನ್ನು ಎದುರಿಸುತ್ತಾರೆ. ಮಹಾಮಾಯೆ ಅಥವಾ ಯೋಗನಿದ್ರೆಯಾಗಿರುವ ದೇವಿಯನ್ನು ಬ್ರಹ್ಮನು ಮೊರೆಹೊಕ್ಕು ಸ್ತುತಿಸುತ್ತಾನೆ. ಬ್ರಹ್ಮನ ಪ್ರಾರ್ಥನೆಯಿಂದ ಸುಪ್ರೀತಳಾದ ದೇವಿ ವಿಷ್ಣುವಿನ ದೇಹದಿಂದ ಹೊರಬರುತ್ತಾಳೆ. ಆಗ ವಿಷ್ಣು ಎಚ್ಚರಗೊಂಡು ಮಧುಕೈಟಭರನ್ನು ಸಂಹರಿಸುತ್ತಾನೆ.

ಎರಡನೆಯ ಭಾಗದಲ್ಲಿ ದೇವಿಯು ಮಹಿಷಾಸುರಮರ್ದಿನಿಯಾಗಿ ಕಾಣಿಸಿಕೊಳ್ಳುತ್ತಾಳೆ; ಅವಳಿಗೆ ಇಲ್ಲಿ ಚಂಡಿಕಾ ಎಂಬ ಹೆಸರು. ಇಲ್ಲಿನ ಕತೆ ಹೀಗಿದೆ: ಮಹಿಷಾಸುರನೆಂಬ ಶಕ್ತಿಶಾಲಿ ರಾಜನ ಕಾಲದಲ್ಲಿ ಅಸುರರು ದೇವತೆಗಳ ಮೇಲೆ ದಂಡೆತ್ತಿ ಹೋಗಿ, ಅವರನ್ನು ಸೋಲಿಸುತ್ತಾರೆ. ಸೋತ ಸುರರು ವಿಷ್ಣು-ಶಿವರ ಬಳಿ ಹೋಗಿ ಮಹಿಷಾಸುರನ ದಾಂಧಲೆಗಳ ಬಗ್ಗೆ ದೂರಿಕೊಳ್ಳುತ್ತಾರೆ. ಶಿವ-ವಿಷ್ಣು ಮೊದಲಾದ ಪ್ರಧಾನ ದೇವತೆಗಳಿಗೆ ಕೋಪ ಬರುತ್ತದೆ. ಅವರ ಕೋಪದ ಕಿರಣಗಳು ಒಗ್ಗೂಡಿ ಆ ಉಜ್ವಲ, ಪ್ರಖರ ತೇಜಸ್ಸು , ಮಹಾಶಕ್ತಿಯನ್ನು ಹೊಂದಿದ ಚಂಡಿಕಾ ಮತ್ತು ಅಂಬಿಕಾ ಎಂದು ಕರೆಯುವ ದೇವಿಯಾಗಿ ರೂಪುಗೊಳ್ಳುತ್ತವೆ. ದೇವಿಯ ಕಣ್ಣುಕುಕ್ಕುವ ತೇಜಸ್ಸನ್ನು ಗಮನಿಸಿದ ಮಹಿಷಾಸುರ ಅವಳೊಡನೆ ಯುದ್ಧ ಮಾಡಲು, ಮೊದಲು ತನ್ನ ಸೈನ್ಯವನ್ನು ಕಳುಹಿಸುತ್ತಾನೆ. ದೇವಿ ಅವರೆಲ್ಲರನ್ನೂ ನಾಶ ಮಾಡುತ್ತಾಳೆ. ಅನಂತರ ಎಮ್ಮೆಯ ರೂಪ ತಾಳಿದ ಮಹಿಷಾಸುರನು ತಾನೇ ದೇವಿಯನ್ನು ಎದುರಿಸುತ್ತಾನೆ. ತಕ್ಷಣವೇ ದೇವಿಯು ಅವನ ಶರೀರದ ಮೇಲೆ ಜಿಗಿದು, ಕಾಲಿನಿಂದ ಅವನ ಕುತ್ತಿಗೆಯನ್ನು ಮೆಟ್ಟಿ, ತನ್ನ ಶೂಲದಿಂದ ಅವನ ಕತ್ತು ಕತ್ತರಿಸುತ್ತಾಳೆ. ಮಹಿಷಾಸುರನ ವಧೆಯಿಂದ ತುಂಬ ನೆಮ್ಮದಿಗೊಂಡ ದೇವತೆಗಳು ದೇವಿಯನ್ನು ವಿಧವಿಧವಾಗಿ ಸ್ತುತಿಸುತ್ತಾರೆ. ಈ ಸ್ತುತಿಗಳು ಎರಡನೆ ಭಾಗದ ಕೊನೆಯಲ್ಲಿ ತುಂಬಿಕೊಂಡಿವೆ.

ಮೂರನೆಯ ಭಾಗದಲ್ಲಿ ದೇವಿಯು ಮೊದಲು ಪಾರ್ವತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಅವಳ ದೇಹದಿಂದ ಅಂಬಿಕಾ ಹೊರಗೆ ಬರುತ್ತಾಳೆ. ಈ ಆಕೃತಿ ಹೊರಬಂದ ಮೇಲೆ ಪಾರ್ವತಿ ಕಪ್ಪಾಗುತ್ತಾಳೆ. ಆಗ ಅವಳನ್ನು ಕಾಳಿಕಾ ಎಂದು ಕರೆಯುತ್ತಾರೆ. ದೇವಿಯ ಇನ್ನೊಂದು ಶೌರ್ಯದ

ಕೆಲಸವನ್ನು ಮೂರನೆಯ ಭಾಗ ವಿವರಿಸುತ್ತದೆ. ಹಿಂದೆ ಶುಂಭ, ನಿಶುಂಭ ಎಂಬ ಇಬ್ಬರು ಸೋದರರು ಮೂರು ಲೋಕಗಳಿಗೂ ಒಡೆಯರಾದರು. ದೇವತೆಗಳು ಎಲ್ಲವನ್ನೂ ಕಳೆದುಕೊಂಡರು. ಅಂಬಿಕೆಯ ಸೌಂದರ್ಯವನ್ನು ಅರಿತ ಈ ಸೋದರರು ಅವಳಿಗೆ ತಮ್ಮ ಬಳಿ ಬರಲು ಹೇಳಿಕಳಿಸಿದರು. ಆಕೆ ತಿರಸ್ಕರಿಸಲು, ಅವಳನ್ನು ಸೆರೆಹಿಡಿದು ತರಲು ಅವರು ಚಂಡ-ಮುಂಡರೆಂಬ ದೈತ್ಯರನ್ನು ಕಳಿಸಿದರು. ಇವರನ್ನು ಕಂಡ ಅಂಬಿಕೆಯು ಸಿಟ್ಟುಗೊಳ್ಳಲು, ಆ ಸಿಟ್ಟಿನಿಂದ ಕಾಳಿಯ ರೂಪ ಹೊರಬಂದು ಆ ದೈತ್ಯರೊಡನೆ ಯುದ್ಧ ಮಾಡಿತು. ಕೊನೆಗೆ ಕಾಳಿ ಚಂಡ ಮುಂಡರ ತಲೆಗಳನ್ನು ಕತ್ತರಿಸಿಹಾಕಿದಳು. ಹೀಗೆ ಆಕೆಗೆ ಚಾಮುಂಡಾ ಎಂಬ ಹೆಸರಾಯಿತು. ಅನಂತರ ಶುಂಭ ನಿಶುಂಭರೇ ರಥ ಹತ್ತಿ ಬಂದು ಅಂಬಿಕೆಯನ್ನು ಮತ್ತು ಕಾಳಿಯನ್ನು ಎದುರಿಸಿದರು. ತುಂಬ ಸಮಯ ಯುದ್ಧ ಮಾಡಿದ ಅನಂತರ ಅಂಬಿಕೆಯು ಶುಂಭ ನಿಶುಂಭರನ್ನು ಧ್ವಂಸ ಮಾಡಿದಳು.

### 'ಚಂಡಿ'ಯ ಪ್ರಾಮುಖ್ಯ

ಮಹಿಷಾಸುರಮರ್ದಿನಿಯಾಗಿ ದುರ್ಗೆಯನ್ನು ಕಾಣುವಲ್ಲಿ ಚಂಡಿಯ ಭಾವವೂ ಸೂಕ್ಷ್ಮವಾಗಿ ಸೇರಿಕೊಂಡಿದೆ. ದುರ್ಗಾ ಪ್ರತಿಮೆಯ ಘೋರ ನೋಟ, ದುಷ್ಟರ ಸಮೂಹವನ್ನೇ ಕೊಂದು ಭೂಮಿಯನ್ನು ರಕ್ತದಲ್ಲಿ ತೋಯಿಸುವ ಯುದ್ಧಗಳಲ್ಲಿ ತೊಡಗಿದ ದೇವಿಯ ವರ್ಣನೆಗಳು ಕೆಲವರಿಗೆ ನಿಗೂಢವೂ, ಜಿಗುಪ್ಸೆ ತರುವಂತಹವೂ ಆಗಿ ತೋರಬಹುದು. ಶಾಕ್ತ ಸಂಪ್ರದಾಯದವರಲ್ಲದ ಹಿಂದೂಗಳಿಗೆ ಹೀಗಾಗುವುದು ಸಹಜ. ಚಂಡಿಯ ನೈಜ ಪ್ರಾಮುಖ್ಯವನ್ನು ತಿಳಿಯಲು ಸಮಾಜ ಮತ್ತು ಮಾನವನ ಜೀವನದಲ್ಲಿಯ ವಸ್ತುಸ್ಥಿತಿಗಳ ಹಿನ್ನೆಲೆಯಲ್ಲಿ ದೈವತ್ವವನ್ನು ವಾಸ್ತವವೂ ಪ್ರೌಢವೂ ಆಗಿ ತಿಳಿಯಬೇಕು. ಚಂಡಿಯ ಪ್ರಾಮುಖ್ಯವನ್ನು ಸರಳವಾಗಿ ಹೀಗೆ ವಿವರಿಸಬಹುದು:

೧. ಶಕ್ತಿಯನ್ನು ವೈಭವೀಕರಿಸುವುದೇ ಚಂಡಿಯ ಮುಖ್ಯ ಉದ್ದೇಶ. ಬ್ರಹ್ಮ ಅಥವಾ ಆತ್ಯಂತಿಕ ಸತ್ಯದ ಕ್ರಿಯಾತ್ಮಕ ಮುಖವೇ ಶಕ್ತಿ. ಸಾಮಾನ್ಯವಾಗಿ ಶಕ್ತಿಯನ್ನು ಸ್ತ್ರೀತತ್ತ್ವವೆಂದು ಭಾವಿಸುತ್ತಾರೆ. ಈ ಸ್ತ್ರೀತತ್ತ್ವವು ಎರಡು ಪ್ರಕಾರದ್ದು: ಕೆಳಹಂತದ ಮೋಹಕಗೊಳಿಸುವ ರೂಪ ಹಾಗೂ ಮೇಲುಹಂತದ ತಾಯಿಯ ರೂಪ.

ಶಾಕ್ತ ಸಂಪ್ರದಾಯದಲ್ಲಿ – ಸಾಮಾನ್ಯವಾಗಿ ಚಂಡಿಯಲ್ಲಿ –ಈ ಮೇಲು ಹಂತದ ತಾಯಿಯ ಭಾವವನ್ನು ವೈಭವೀಕರಿಸಲಾಗಿದೆ. ಶ್ರೀರಾಮಕೃಷ್ಣರು ಯಾರು ಬ್ರಹ್ಮನೋ ಅವನೇ ಶಕ್ತಿ, ಅವನೇ ಈ ವಿಶ್ವದ ಮಾತೆ (*ಜೆನಿ ಬ್ರಹ್ಮ ತಿನಿ ಶಕ್ತಿ, ತಿನಿ* ಇ ಮಾ) ಎಂದು ಹೇಳುತ್ತಿದ್ದರು.

ತಾಯಿಯ ಕೆಲಸ ಮೂರು ರೀತಿಯದು: ಹುಟ್ಟಿಸುವುದು, ಪೋಷಿಸುವುದು, ರಕ್ಷಿಸುವುದು. ಚಂಡಿಯಲ್ಲಿ ಮೂರನೆಯ ರಕ್ಷಣೆಯ ಕಾರ್ಯಕ್ಕೆ ಮಹತ್ತ್ವ. ಮಾನವನ ಜೀವನ ನಾಟಕದಲ್ಲಿ ದೇವಿ ಅನಾಸಕ್ತ ಪ್ರೇಕ್ಷಕಳಲ್ಲ. ಅವಳೂ ಕ್ರಿಯಾಶೀಲ ರಂಗಕರ್ಮಿ. ಜನರನ್ನು ಅಪಾಯಗಳಿಂದ ರಕ್ಷಿಸುವವಳು. ದುಷ್ಟರನ್ನು ಶಿಕ್ಷಿಸುತ್ತ, ಕೋಟ್ಯಂತರ ಜನರನ್ನು ಅಪಾಯಗಳಿಂದ ರಕ್ಷಿಸುತ್ತಿರುವ ವಿಶ್ವರೂಪೀ ಮಾತೆಯನ್ನು ಪರಿಭಾವಿಸಿ ನೋಡಿ. 'ಚಂಡಿ'ಯಲ್ಲಿರುವುದು ಇಂತಹ ತಾಯಿ ದೇವಿ.

೨. ಚಂಡಿಯ ಎರಡನೆಯ ಉದ್ದೇಶ, ದುಷ್ಟತನದ ವಾಸ್ತವಿಕತೆಯನ್ನು ಚಿತ್ರಿಸುವುದು. ದುರ್ಗುಣ, ದುಷ್ಟತನ, ಕ್ರೌರ್ಯ, ಅನ್ಯಾಯ, ದುಃಖ – ಇವೆಲ್ಲವೂ ಅನಾದಿ ಕಾಲದಿಂದ ಮಾನವನು ಬಯಸಿ, ಆದರ್ಶೀಕರಿಸಿದ 'ಸದ್ಗುಣ, ಪ್ರೀತಿ, ಕರುಣೆ, ಸಹಕಾರ ಇತ್ಯಾದಿಗಳಷ್ಟೇ ವಾಸ್ತವ. ಧರ್ಮ–ಅಧರ್ಮ, ಸದ್ಗುಣ–ದುರ್ಗುಣಗಳು ವಾಸ್ತವಿಕತೆಯ ಬೇರ್ಪಡಿಸಲಾಗದ ಮುಖಗಳು, ಮತ್ತು, ಈ ದ್ವಂದ್ವಗಳನ್ನು ನಾವು ಪೂರ್ತಿಯಾಗಿ ಒಪ್ಪಿಕೊಳ್ಳಬೇಕು.

ನಾವು ಸಾಮಾನ್ಯವಾಗಿ ದೇವರ ಜತೆ ಪ್ರೀತಿ, ಕರುಣೆಗಳನ್ನು ಮಾತ್ರ ತಳುಕುಹಾಕುತ್ತೇವೆ. ದೇವರು ಶಕ್ತಿ, ಭಯ, ನಾಶಗಳ ರೂಪದಲ್ಲೂ ಇರುವನೆಂಬುದನ್ನು ಮರೆಯುತ್ತೇವೆ. ಶ್ರೀಕೃಷ್ಣನು ಅರ್ಜುನನಿಗೆ ದೇವರ ಈ ವಿನಾಶಿ ನೋಟವನ್ನೇ ವಿಶ್ವರೂಪ ದರ್ಶನದಲ್ಲಿ ತೋರಿಸಿದ್ದು. ಚಂಡಿಯಲ್ಲಿ ಅನಾದಿ ಸ್ತ್ರೀತ್ವದೊಂದಿಗೆ ಹೊಂದಿಕೊಂಡಂತೆ ಈ ಭಯಂಕರ ರೂಪವನ್ನೆ ನಾವು ಕಾಣುವುದು.

ಚಂಡಿಯಲ್ಲಿ ಬರುವ ಮಹಿಷಾಸುರ, ಶುಂಭ, ನಿಶುಂಭ ಮುಂತಾದವರು ಪೌರಾಣಿಕ ಪಾತ್ರಗಳಾಗಿದ್ದರೂ, ಈಗಿನ ಪ್ರಪಂಚಕ್ಕೆ ಅಸಂಬದ್ಧ ಎನಿಸುವುದಿಲ್ಲ. ಆಧುನಿಕ ಕಾಲದಲ್ಲಿ ಇಂತಹ ಅಥವಾ ಇವಕ್ಕೂ ಹೀನ ಮಾದರಿಯ ಜನರನ್ನು ನಾವು ಕಾಣುತ್ತಿಲ್ಲವೇ? ಜನಾಂಗಹತ್ಯೆ ನಡೆಸುವ ರಾಜಕೀಯ ನಾಯಕರು, ತುಂಬಿದ ರೈಲು ಬಸ್ಸು ಮಾರುಕಟ್ಟೆಗಳಿಗೆ ಬಾಂಬುಗಳನ್ನಿಡುವ ಭಯೋತ್ಪಾದಕರು, ಸರಣಿ ಹಂತಕರು, ಅತ್ಯಾಚಾರಿಗಳು – ನಾವು ದಿನನಿತ್ಯವೂ ಪತ್ರಿಕೆಗಳಲ್ಲಿ ಓದುವ ಈ ಜನರೆಲ್ಲ 'ಚಂಡಿ'ಯಲ್ಲಿ ಬರುವ ದೈತ್ಯರಿಗಿಂತ ಭಿನ್ನರೆ? ಹಿಂದಿನ ಯಾವ ಕಾಲಕ್ಕಿಂತಲೂ ಈಗಿನ ಕಾಲದ ಪ್ರಪಂಚದಲ್ಲೇ 'ಚಂಡಿ' ಹೆಚ್ಚು ವಾಸ್ತವ, ಹೆಚ್ಚು ಹೊಂದಿಕೆಯಾಗುತ್ತದೆ.

'ಚಂಡಿ' ಒಂದು ಕಟ್ಟುಕತೆಯಲ್ಲ. ಅದು ಸ್ವರ್ಗದಂತಹ ಲೋಕದ ಭರವಸೆಯನ್ನು ನಮಗೆ ನೀಡುವುದಿಲ್ಲ. ಬದಲಾಗಿ ನಮ್ಮನ್ನು ನಿಷ್ಪ್ರಯೋಜಕ ಕನಸುಗಳಿಂದ ಬಡಿದೆಬ್ಬಿಸಿ, ನಾವು

ಎದುರಿಸಲು ನಿರಾಕರಿಸುವ ಈಗಿನ ಭಯಂಕರ ಪ್ರಪಂಚದ ಕಟು ವಾಸ್ತವತೆಯ ನಟ್ಟನಡುವೆ ನಮ್ಮನ್ನು ನಿಲ್ಲಿಸುತ್ತದೆ.

೩. ಚಂಡಿಯ ಮೂರನೆಯ ಸಂದೇಶ ಸ್ತ್ರೀ ಸಬಲೀಕರಣ. ಈಚಿನ ವರ್ಷಗಳಲ್ಲಿ ಗ್ರಾಮೀಣ ಹಾಗೂ ಆದಿವಾಸಿ ಪ್ರದೇಶಗಳ ಸ್ತ್ರೀಯರಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. 'ಚಂಡಿ' ನಮಗೆ ಇಂತಹ ಸ್ತ್ರೀ ಸಬಲೀಕರಣ ಎಷ್ಟು ಗಾಢವಾಗಬಹುದೆಂಬುದನ್ನು ತೋರಿಸುತ್ತದೆ. ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ, ಚಿಕ್ಕಂದಿನಿಂದಲೂ ತಾನು ಅಬಲೆ, ಅಸಹಾಯಕಳು ಹಾಗೂ ಗಂಡಿನ ಮೇಲೆ ಅವಲಂಬಿತೆ ಎಂದು ನಂಬುವಂತೆ ಹೆಣ್ಣಿಗೆ ಬೋಧಿಸಲಾಗುತ್ತದೆ. ಆದರೆ ಎಲ್ಲಕ್ಕೂ ಗಂಡಿನ ಬೆಂಬಲ ಇಲ್ಲದೆ ಹೆಣ್ಣು ಎಷ್ಟರ ಮಟ್ಟಿನಶಕ್ತಿಯನ್ನು ಹೊಂದಬಹುದು, ಹೇಗೆ ಅವಳು ಸ್ವತಂತ್ರಳಾಗಿ ಕಾರ್ಯನಿರ್ವಹಣೆ ಮಾಡಬಹುದು, ಭೀಕರ ಯುದ್ಧಗಳನ್ನು ಎದುರಿಸಿ ಗೆಲ್ಲಬಹುದು ಎಂಬುದನ್ನು 'ಚಂಡಿ' ತೋರಿಸಿಕೊಡುತ್ತದೆ.

೪. ಕೊನೆಯದಾಗಿ ಚಂಡಿಯು ನಿರೀಕ್ಷೆ, ದೈವೀ ಸಹಾಯದ ಭರವಸೆ, ಒತ್ತಾಸೆಗಳ ಸಂದೇಶವನ್ನು ನೀಡುತ್ತದೆ. ಗ್ರಂಥದಲ್ಲಿ ಭಯಂಕರ ಘಟನೆಗಳ ಸರಣಿಯೇ ಇದ್ದರೂ ಚಂಡಿಯಲ್ಲಿ ನಿರಾಶೆಯ, ಹತಾಶೆಯ ಧ್ವನಿ ಇಲ್ಲವೇ ಇಲ್ಲ. ಕಷ್ಟಗಳು, ತೊಂದರೆಗಳು ಬರಲಿ, ದೊಡ್ಡ ವಿಪತ್ತುಗಳೇ ಸಂಭವಿಸಲಿ, ನಾವು ಭಯಪಡಬೇಕಾಗಿಲ್ಲ. ಏಕೆಂದರೆ ಎಲ್ಲ ಅಪಾಯಗಳಿಂದ ನಮ್ಮನ್ನು ಪಾರುಮಾಡುವ ಅಥವಾ ಅವನ್ನು ಎದುರಿಸುವ ಧೈರ್ಯವನ್ನು ನೀಡುವ ಒಬ್ಬ ದೇವರು ಅಥವಾ ತಾಯಿ ಇದ್ದಾಳೆ. ನವಯುಗದಲ್ಲಿ ಶ್ರೀಶಾರದಾದೇವಿಯಾಗಿ ಅವತಾರವೆತ್ತಿದ ದೇವಿಯು ನಮಗೆ ಈ ಭರವಸೆಯನ್ನು ನೀಡಿರುವಳು: "ನಿಮ್ಮ ಬೆನ್ನ ಹಿಂದೆ ಯಾರೋ ಒಬ್ಬರು ಸದಾ ಇರುವರೆಂಬುದನ್ನು ನೆನಪಿಡಿ... ನಿಮ್ಮ ಹೊರೆಯನ್ನೆಲ್ಲ ನನ್ನ ಮೇಲೆ ಇಟ್ಟು ನಿಶ್ಚಿಂತರಾಗಿ ಇರಿ." *(ಮುಂದುವರಿಯುವುದು)*

# ಮನನ-ಮಾನ್ಯ

## ಧರ್ಮಬೋಧನೆ

**-ಮಧುಪ**

ಕೇವಲ ಧರ್ಮಬೋಧನೆ ಹಸಿದವರ ಹೊಟ್ಟೆಯನ್ನು ತುಂಬಿಸಲಾರದು. ಆದುದರಿಂದ ಹಸಿದವರಿಗಲ್ಲ ವೇದಾಂತ.

ಬಡವರ ದುಡಿಮೆಗೆ ನ್ಯಾಯವಾದ ಪ್ರತಿಫಲವನ್ನು ದೊರಕಿಸುವ, ನೊಂದವರ ಕಣ್ಣೀರನ್ನು ಒರೆಸಿ ಧೈರ್ಯ-ಸಮಾಧಾನವನ್ನು ಕೊಡುವ, ಬಿದ್ದವರ, ಯಾರೂ ದಿಕ್ಕಿಲ್ಲದವರ ಪರವಾಗಿ ನಿಂತು ಸಹಾಯವನ್ನು ಆಶ್ರಯವನ್ನು ಒದಗಿಸುವ, ಧ್ಯೇಯವನ್ನಿಟ್ಟುಕೊಂಡು ಪ್ರೀತಿ-ಸಹಾನುಭೂತಿ-ತ್ಯಾಗ ಭಾವನೆಗಳಿಂದ ಮಾಡುವ ಸೇವೆಯಲ್ಲಿ ದೇವರನ್ನು ಕಾಣಬಹುದು. ಕಷ್ಟದಲ್ಲಿರುವವರ, ದುಃಖಿಗಳ ಸೇವೆಯೇ ದೇವರಿಗೆ ಸಂತೋಷವುಂಟು ಮಾಡುವ ಶ್ರೇಷ್ಠವಾದ ಪೂಜೆ, ಶ್ರೇಷ್ಠವಾದ ಭಗವತ್ಸೇವೆ.

ಜಾತಿ, ಕುಲ, ಮೇಲು, ಕೀಳು ಎಂಬ ಬೇಧಭಾವನೆಗಳನ್ನು ಬಿಟ್ಟು ಎಲ್ಲರನ್ನೂ ಸಮಾನ ಗೌರವದಿಂದ ಕಾಣುವುದನ್ನು ಸತತವಾದ ಪ್ರಯತ್ನಗಳಿಂದ ಅಭ್ಯಾಸ ಮಾಡಬೇಕು.

ಸ್ವಾಮಿ ವಿವೇಕಾನಂದರನ್ನು ಒಬ್ಬ ಪಂಜಾಬಿ ಸದ್ಗೃಹಸ್ಥ ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಪ್ರಾರ್ಥಿಸಿದನಂತೆ. ಆಗ ಅವರು ಹೇಳಿದರಂತೆ, "ಆಗಲಿ. ನಾನೇನೊ ಸಂತೋಷವಾಗಿ ನಿನ್ನ ಆತಿಥ್ಯವನ್ನು ಸ್ವೀಕರಿಸುತ್ತೇನೆ. ಆದರೆ ಒಂದು ನಿಬಂಧನೆಯ ಮೇಲೆ. ಅಸ್ಪೃಶ್ಯರ ಮನೆಯಲ್ಲೂ ನಾನು ಸಂತೋಷವಾಗಿ ಊಟ ಮಾಡಿದ್ದೇನೆ. ಅವರು ಗೌರವಾನ್ವಿತ ಮನುಷ್ಯರೆಂದು ನಾನು ತಿಳಿದಿದ್ದೇನೆ. ನಿನ್ನ ಮನಸ್ಸಿನಲ್ಲಿಯೂ ಇದೇ ಭಾವನೆ ಇದ್ದರೆ, ನಿನಗೆ ಯಾವ ಜಾತೀಯ ಭಾವನೆಗಳೂ ಇಲ್ಲದಿದ್ದರೆ ನಿನ್ನ ಮನೆಗೆ ಬರುತ್ತೇನೆ. ಹಾಗಿಲ್ಲದೆ ಉತ್ತಮ ಕುಲದವನೆಂಬ ಹೆಮ್ಮೆ ನಿನಗಿದ್ದರೆ, ಕ್ಷಮಿಸು ನಾನು ಬರಲಾರೆ."

ಸ್ವಾಮಿಜಿ ದೀನವ್ಯಕ್ತಿ ಆಗಿರಲಿಲ್ಲ. ಮಹಾ ಅಭಿಮಾನಿ. ಮೇಧಾಶಕ್ತಿಯಲ್ಲಿ, ಪ್ರತಿಭೆಯಲ್ಲಿ ತಾವು ಶ್ರೇಷ್ಠರೆಂದು ಅರಿತಿದ್ದರು. ಅಂತಹವರು ದೀನ ದಲಿತರು ನಾರಾಯಣಸ್ವರೂಪರೆಂದು ಕಂಡರು.

ಶ್ರೇಷ್ಠ ವಂಶದಲ್ಲಿ ಹುಟ್ಟಿದ ಬುದ್ಧ, ಬಸವಣ್ಣ, ಗಾಂಧೀಜಿ ಅವರುಗಳೂ ಜಾತಿಹೀನರಲ್ಲೂ ಶ್ರೇಷ್ಠ ಗುಣಗಳನ್ನು ಗುರುತಿಸಿದರು. ಗೌರವಿಸಿದರು, ಸದ್ಗುಣ-ಸದಾಚಾರಗಳಿಂದ ಮನುಷ್ಯ ಶ್ರೇಷ್ಠನಾಗುತ್ತಾನೆಯೇ ವಿನಹ ಹುಟ್ಟಿನಿಂದಲ್ಲ, ವೃತ್ತಿಯಿಂದಲ್ಲ; ಹಣ-ಅಧಿಕಾರ-ಪದವಿಗಳಿಂದ ಅಲ್ಲವೇ ಅಲ್ಲ.

ಪರಮಾತ್ಮನ ದಿವ್ಯಸಂಕಲ್ಪದಿಂದ ಆಳ್ವಾರರ ಮುಖಾರವಿಂದದಿಂದ ಹೊರಬಂದು ನಮಗೆ ಲಭಿಸಿರುವ ದ್ರವಿಡ ವೇದಸಾರವಾದ ನಾಲಾಯಿರ ದಿವ್ಯಪ್ರಬಂಧಗಳ ಪಾರಾಯಣವು ಕನ್ನಡಲ್ಲಿಯೂ ಈಗ MP3 ಸಿ.ಡಿ.ಗಳಲ್ಲಿ ಉಚಿತವಾಗಿ ಲಭ್ಯವಿದೆ. ಈ ಸಿ.ಡಿ.ಗಳನ್ನು ಪಡೆಯಬೇಕಾದರೆ, ಕೇವಲ ಅಂಚೆ ವೆಚ್ಚ ಅಥವಾ ಕೊರಿಯರ್ ವೆಚ್ಚ ಭರಿಸಿದರೆ ಸಾಕು. ಹೆಚ್ಚಿನ ವಿವರಗಳಿಗೆ ಈ ವಿಳಾಸವನ್ನು ಸಂಪರ್ಕಿಸಿ: **ಶ್ರೀ ಪಾತಾಳಂ ಸುಬ್ಬಾರಾವ್, ಧರ್ಮಕರ್ತರು, ಶ್ರೀವೆಂಕಟೇಶ್ವರ ಸ್ವಾಮಿ ದೇವಸ್ಥಾನ, ದ್ರೋಣಾಚಲಂ – 518222, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ, ಫೋನ್: 08156-222051(ಆಫೀಸು), 290777 (ದೇವಸ್ಥಾನ), 9440290041**